We hereby inform all our stakeholders and customers that our Khammam Branch, located at 1st Floor, APGVB Bank Complex, No. 10-4-64/65, Plot No. 102, Mamillagudem, Khammam, Telangana – 507001, will be closed with effect from **27 November 2026**. Please note that the closure of this branch will not affect the services provided to our customers in any manner. All existing and prospective customers are requested to contact our customer helpline at **0124-6555-555** between **8:00 AM and 8:00 PM**. Alternatively, customers may email us at **support@indiabullsarc.com** for any queries or related matters.

Sd/-
Authorized Officer
For Indiabulls Asset Reconstruction Company Limited

TATA
TATA POWER

The Tata Power Company Limited
(Mundra Thermal Power Station - UMPP)
Tunda Vandh Road, Tunda Village, Mundra, Kutch, Gujarat
Reg. Office: Bombay House, 24 Homi Modi Street, Mumbai – 400 001

NOTICE INVITING EXPRESSION OF INTEREST

The Tata Power Company Limited hereby invites Expression of Interest (EOI) from eligible bidders for the following requirement for 4150 MW UMPP Mundra Thermal Power Station (MTPS):

1. **Bunker Ventilation system Structure Strengthening & Replacement and Duct Replacement work REF 4100073544**

For prequalification requirements, tender fee, bid security etc., please visit Tender section of our website **(URL: https://www.tatapower.com/tender/tenders-listing)** and refer detailed Tender Notice for subject tender. Eligible bidders willing to participate in this tender may submit their Expression of Interest along with the Tender Fee latest by **19/11/2026**

TATA
TATA POWER

(Corporate Contracts Department)
The Tata Power Company Limited, Smart Center of Procurement Excellence, 3rd Floor, Sahar Receiving Station, Near Hotel Leela, Sahar Airport Road Andheri (E), Mumbai 400 059, Maharashtra, India
(Board Line: 022-67173917) CIN: L28920MH1919PLC000567

NOTICE INVITING TENDER (NIT)

The Tata Power Company Limited invites bids from eligible vendors for the following tender packages (Two-part Bidding) in Mumbai.

(A) External Rehabilitation works of 220 kV GIS building at Salsette RSS. **(Package Ref No: CC27SVP028).**
(B) Outline agreement of 02 years for waterproofing services at Transmission division & Colonies in Mumbai **(Package Ref No: CC27TP047)**

For packages (A) & (B) Interested and eligible bidders to submit Tender Fee and Authorization Letter before **1500 hrs. Wednesday, 18th November 2026.**

For detailed NIT, please visit Tender section on website **https://www.tatapower.com**. Also, all future corrigendum's if any, to the said tender will be published on Tender section of above website **(Tata Power → Business Associates → Tender Documents)** only.

meisl

MAESTROS ELECTRONICS & TELECOMMUNICATIONS SYSTEMS LIMITED
CIN: L74900MH2010PLC200254
Registered Office: EL-66, TTC Industrial Area, Electronic Zone, Mahape, Navi Mumbai - 400 710 Maharashtra, India
Tel: +91-22-2761 11 93 | **Website:** www.maestroselectronics.com | Email ID: cs@metsl.in

LETTER TO ALL SHAREHOLDERS HOLDING SHARES IN PHYSICAL FORM SPECIAL WINDOW FOR RE-LODGEMENT OF TRANSFER REQUESTS FOR PHYSICAL SHARES

Dear Shareholder,

We hope this communication finds you in good health and high spirits. We thank you for your continued support as a valued shareholder of **Maestros Electronics and Telecommunications Systems Limited.**

Pursuant to the Securities and Exchange Board of India (SEBI) Circular No. SEBI/ HO/38/13/ 11(2)2026-MIRSD-POD/I/3750/2026 dated January 30, 2026, all shareholders are hereby informed that a **special window** is being opened for a period of **One (01) year from February 05, 2026 to February 04, 2027**, to facilitate Re-lodgement of Transfer Requests of Physical Shares. This facility is available for transfer deeds that were lodged prior to **April 01, 2019**, but were rejected/returned/not attended due to deficiency in the documents/process/or otherwise.

All transfer requests that are duly rectified and re-lodged during the aforesaid period will be processed through the transfer-cum-demat mode, i.e., the shares will be transferred and issued only in dematerialised form. Accordingly, the eligible investors must have an active demat account and are required to submit their re-lodgement requests, along with all requisite documents, duly executed transfer deed(s), original share certificate(s), and any other necessary documents, to the Company and/or to **M/s. MUFG Intime India Private Limited,** the Company's Registrar and Share Transfer Agent (RTA), within the stipulated timeline, at the contact details provided below:

M/s. MUFG Intime India Private Limited	
Address:	C-101, Embassy 247, L.B.S. Marg, Vikhroli (West), Mumbai - 400083
Telephone no.:	+91-22-49186000 (From 10:00 a.m. to 5:00 p.m. on all working days)
Email Id:	rnt.helpdesk@in.mpms.mufg.com

The SEBI circular can be accessed at: https://www.sebi.gov.in/legal/circulars/jan-2026/ease-of-doing-investmen special-window-for-transfer-and-dematerialisation-of-physical-securities_99411.html

Sd/-
Balkrishna Kamalakar Tendulkar
DIN: 02448116
Managing Director
Address: Plot No. EL/66, TTC Industrial Area, Electronic Zone, Mahape, Navi Mumbai, Thane-400710, Maharashtra, India.

Date: November 07, 2026

ಸಮಾಚಾರ ಸಣ್ಣದಲ್ಲ

ಕೆಇಎ ಪರೀಕ್ಷೆ: ಶೇ.38ರಷ್ಟು ಹಾಜರು

ಬೆಂಗಳೂರು: ಕಲ್ಯಾಣ ಕರ್ನಾಟಕ ವೃಂದಕ್ಕೆ ಸಂಬಂಧಿಸಿದಂತೆ ಪೌರಾಡಳಿತ ಇಲಾಖೆಯಲ್ಲಿನ ಎಲೆಕ್ಟ್ರಿಷಿಯನ್ ಗ್ರೇಡ್-1 ಮತ್ತು ಗ್ರೇಡ್-2 ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರ ನಡೆಸಿದ ಲಿಖಿತ ಪರೀಕ್ಷೆಯನ್ನು ಶೇ.38 ರಷ್ಟು ಅಭ್ಯರ್ಥಿಗಳು ಬರೆದಿದ್ದಾರೆ. ಬೆಂಗಳೂರಿನ ಎರಡು ಕೇಂದ್ರಗಳಲ್ಲಿ ಸುಸೂತ್ರವಾಗಿ ಪರೀಕ್ಷೆ ನಡೆಯಿತು. ಅರ್ಜಿ ಸಲ್ಲಿಸಿದ್ದ 1,015 ಮಂದಿ ಪೈಕಿ 382 ಮಂದಿ ಪರೀಕ್ಷೆಗೆ ಹಾಜರಾಗಿದ್ದರು. ಪ್ರತಿ ಕೊಠಡಿಗೆ ತಲಾ ಇಬ್ಬರು ಪರೀಕ್ಷಾ ಮೇಲ್ವಿಚಾರಕರನ್ನು ಇದೇ ಮೊದಲ ಬಾರಿಗೆ ನಿಯೋಜಿಸಲಾಗಿತ್ತು. ಒಬ್ಬರು ಮೇಲ್ವಿಚಾರಕರು ಕೊಠಡಿಯಲ್ಲೇ ಮುಂಭಾಗದಲ್ಲಿ ಇದ್ದರೆ, ಮತ್ತೊಬ್ಬರು ಹಿಂಭಾಗದಲ್ಲಿ ನಿಂತು ನಿಗಾವಹಿಸಲು ಸೂಚಿಸಲಾಗಿತ್ತು. ಒಟ್ಟಿನಲ್ಲಿ ಕಟ್ಟುನಿಟ್ಟಿನ ಬಿಗಿ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಬಾಲು ಫೋರ್ಜ್‌ಗೆ ಹೊಸ ಮೈಲಿಗಲ್ಲು

ಬೆಂಗಳೂರು: ರಕ್ಷಣಾ, ಏರೋಸ್ಪೇಸ್, ಇಂಧನ ಹಾಗೂ ಭಾರಿ ವಾಹನ ಉತ್ಪಾದನಾ ಕ್ಷೇತ್ರಗಳಲ್ಲಿ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿರುವ ಬಾಲು ಫೋರ್ಜ್ ಇಂಡಸ್ಟ್ರೀಸ್ ಲಿಮಿಟೆಡ್, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಹತ್ವದ ಸಾಧನೆ ಮಾಡಿದೆ. ಅಮೆರಿಕ ಮತ್ತು ಯುರೋಪ್ ಪ್ರಮುಖ ಕಂಪನಿಗಳಿಂದ ಹೊಸ ಖರೀದಿ ಆರ್ಡರ್ ಪಡೆದುಕೊಂಡಿರುವ ಸಂಸ್ಥೆ, ರಕ್ಷಣಾ ಉತ್ಪಾದನಾ ವಲಯದಲ್ಲಿಯೂ ತನ್ನ ಸಾಮರ್ಥ್ಯ ಸಾಬೀತುಪಡಿಸಿದೆ. ಫಿರಂಗಿ ಶೆಲ್‌ಗಳ ಉತ್ಪಾದನೆಗೆ ಅನುಮೋದನೆ ನೀಡಿದೆ ಎಂದು ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ತ್ರಿಮಾನ್ ಚಾಂದೋಕ್ ತಿಳಿಸಿದರು.

ಎಸ್.ಸಿ.ಜಯಶಂಕರಗೆ ಪಿಎಚ್.ಡಿ ಪ್ರದಾನ

ಮೈಸೂರು: ಡಾ.ಬಿ.ಎನ್.ಶೇಷಗಿರಿ ರಾವ್ ಅವರ ಮಾರ್ಗದರ್ಶನದಲ್ಲಿ ಎಸ್.ಸಿ.ಜಯಶಂಕರ ಅವರು ಸಂಶೋಧನೆ ನಡೆಸಿ ಮಂಡಿಸಿದ 'ಡಾ.ಬಿ.ಆರ್.ಅಂಬೇಡ್ಕರ್ ಅವರ ಧಾರ್ಮಿಕ ತತ್ವಗಳು -ಒಂದು ವಿವೇಚನೆ' ಎಂಬ ವಿಷಯ ಕುರಿತ ಮಹಾಪ್ರಬಂಧವನ್ನು ತತ್ವಶಾಸ್ತ್ರ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.



ಮಠದಲ್ಲಿ ಯಾವುದೇ ವಿಗ್ರಹ ಕಳುವಾಗಿಲ್ಲ

ಮಡಿಕೇರಿ: ಉಡುಪಿ ಬಾಳೆಕುದ್ರು ಮಠದಲ್ಲಿ ವಿಗ್ರಹ ಕಳವು ಪ್ರಕರಣ ಸಂಬಂಧ ಶ್ರೀ ಮಠದಲ್ಲಿ ಯಾವುದೇ ವಿಗ್ರಹಗಳು ಕಳುವಾಗಿಲ್ಲ. ಎಲ್ಲವೂ ಮಠದಲ್ಲೇ ಸುರಕ್ಷಿತವಾಗಿದೆ ಎಂದು ವಾಸುದೇವ ಸದಾಶಿವ ಶಿವಸ್ವಾಮಿಗಳು ಸ್ಪಷ್ಟನೆ ನೀಡಿದ್ದಾರೆ. ತಲಕಾವೇರಿಯಲ್ಲಿ ಮಾತನಾಡಿದ ಅವರು, ಪ್ರಾಚೀನ ಬಿಂಬಗಳಿಗೆ ಹಾನಿಯಾಗಿತ್ತು. ವ್ಯತ್ಯಾಸಗಳಿದ್ದಾಗ ಅದನ್ನು ಪೂಜೆ ಮಾಡುವುದು ಅಶಾಸ್ತ್ರೀಯ. ಹಾಗಾಗಿ ಭಿನ್ನ ಬಿಂಬಗಳನ್ನು ಪ್ರಸಿದ್ಧ್ ಐಡಲ್ಸ್‌ಗೆ ಕೊಟ್ಟು ರಿಪೇರಿ ಮಾಡಿ ತರಲಾಗಿದೆ. 2013 ರ ಕಾಲದಿಂದಲೇ ಷಡ್ಯಂತ್ರ ನಡೆಯುತ್ತಿದೆ. ಶಿಷ್ಯ ವರ್ಗ ಎಂದುಕೊಳ್ಳುವ ಜನರು ಮಠವನ್ನು ಸ್ವಾಧೀನಕ್ಕೆ ಪಡೆಯಲು ಬಯಸಿದ್ದಾರೆ. ಮಠದ ಭೂಮಿಗೆ ಸಂಬಂಧಪಟ್ಟ ವಿಚಾರ ಸೇರಿದೆ. ಮಠ ಬ್ರಾಹ್ಮಣರಿಗೇ ಮಾತ್ರ ಸಂಬಂಧಪಟ್ಟಿದ್ದಲ್ಲ. ಅಲ್ಲಿ ಕಂಬಳ, ದೈವಾರಾಧನೆ ಇದೆ. ಎಲ್ಲಾ ಸಮಾಜಕ್ಕೆ, ಅಖಂಡಸಮಾಜಕ್ಕೆ ಸಂಬಂಧಪಟ್ಟ ಮಠ. ಆದರೆ ಕೆಲಶಿಷ್ಯರ ಷಡ್ಯಂತ್ರದಿಂದ ಈ ರೀತಿ ಆಗಿದೆ ಎಂದು ಸ್ಪಷ್ಟಪಡಿಸಿದರು. ಹಿರಿಯ ಶ್ರೀಗಳಿಗೂ ಹೀಗೇ ಮಾಡಿದ್ದಾರೆ. ಭಕ್ತರು ಯಾವುದೇ ಗೊಂದಲಕ್ಕೊಳಗಾಗಬೇಡಿ. ಇದು ಶ್ರೀಮಠ ಹಾಗೂ ನನ್ನ ವಿರುದ್ಧ ನಡೆದ ದೊಡ್ಡ ಷಡ್ಯಂತ್ರ. ಈ ಹಿಂದೆ ಹಿರಿಯ ಶ್ರೀಗಳ ವಿರುದ್ಧವೂ ಇದೇ ರೀತಿ ಷಡ್ಯಂತ್ರ ನಡೆದಿತ್ತು. ಬಸವೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲಾಗಿರುವುದು ಗೊತ್ತಿಲ್ಲ. ಪೊಲೀಸರಿಂದ ನನಗೆ ಯಾವುದೇ ನೋಟಿಸ್ ಬಂದಿಲ್ಲ. ವಕೀಲರನ್ನ ಸಂಪರ್ಕಿಸಿ ಕಾನೂನಾತ್ಮಕವಾಗಿ ಎದುರಿಸುತ್ತೇನೆ ಎಂದರು.

ರಾಗಾ ಅಭಿಯಾನ ವೈಯಕ್ತಿಕವಲ್ಲ



ದೆಹಲಿ: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಗೆ ದೀಪಾವಳಿ ಶುಭಕೋರಿ, ಎಲ್ಲರಲ್ಲೂ ಐಕ್ಯತೆ, ಶಾಂತಿ ಮತ್ತು ಪ್ರೀತಿಯ ಸಂದೇಶವನ್ನು ಸಾರಿದ್ದಾರೆ ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ತಿಳಿಸಿದರು. ಸಿಇಸಿ ಪದಚ್ಯುತಿ ಹೋರಾಟವು ರಾಹುಲ್ ಗಾಂಧಿ ಅವರ ಸ್ವಂತ ಅಭಿಯಾನವಲ್ಲ, ಇದು ದೇಶದ ಅಭಿಯಾನ ಹಾಗೂ ಜನರ ಧ್ವನಿ ಎಂದರು. ಕಾಂಗ್ರೆಸ್ ಪಕ್ಷವು ದೇಶಕ್ಕೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ನೀಡಿದೆ. ವಿರೋಧ ಪಕ್ಷದ ನಾಯಕರಾಗಿ ರಾಹುಲ್ ಗಾಂಧಿ ಅವರು ಸಂವಿ ಧಾನವನ್ನು, ಪ್ರಜಾಪ್ರಭುತ್ವವನ್ನು ಮತ್ತು ಜನರ ಹಕ್ಕುಗಳನ್ನು ರಕ್ಷಿಸುತ್ತಿದ್ದಾರೆ ಎಂದು ಹೇಳಿದರು. ಕಾಂಗ್ರೆಸ್ ಇತಿಹಾಸವೇ ದೇಶದ ಇತಿಹಾಸ, ಕಾಂಗ್ರೆಸ್ ಶಕ್ತಿಯೇ ದೇಶದ ಶಕ್ತಿ ಎಂದು ತಿಳಿಸಿದರು.

ಅಕ್ಕಮಹಾದೇವಿ ಬಡಾವಣೆಯಲ್ಲಿ ಉಚಿತ ಭೂಮಂಜೂರು | ಕಲ್ಯಾಣ ಕರ್ನಾಟಕದಲ್ಲಿ ಉದ್ಯಮ ಆರಂಭಿಸಲು ಅವಕಾಶ

ಕಲಬುರಗಿಯಲ್ಲಿ ಲೀಪ್ ಗ್ರೋತ್ ಲ್ಯಾಬ್ ಸ್ಥಾಪನೆಗೆ ಕ್ರಮ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ನಾವೀನ್ಯತೆ, ತಂತ್ರಜ್ಞಾನ ಆಧಾರಿತ ಸಂಶೋಧನೆಯನ್ನು ಗಮನದಲ್ಲಿರಿಸಿಕೊಂಡು ಲೀಪ್ ಗ್ರೋತ್ ಲ್ಯಾಬ್ ಅನ್ನು ಕಲಬುರಗಿಯಲ್ಲಿ ಸ್ಥಾಪಿಸಲು ಕ್ರಮವಹಿಸಲಾಗುವುದು ಎಂದು ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ನಾವೀನ್ಯತೆ, ತಂತ್ರಜ್ಞಾನ ಆಧಾರಿತ ಸಂಶೋಧನೆ ಹಾಗೂ ಉದ್ಯಮಶೀಲತೆಯನ್ನು ರಾಜ್ಯದ ಎಲ್ಲ ಭಾಗಗಳಿಗೂ ವಿಸ್ತರಿಸುವ ಉದ್ದೇಶದಿಂದ ಜಾರಿಗೆ ತರಲಾಗಿರುವ 'ಲೀಪ್ ಗ್ರೋತ್ ಲ್ಯಾಬ್' ಯೋಜನೆಯಲ್ಲಿ ಕಲಬುರಗಿಯಲ್ಲಿ ನಾವೀನ್ಯತಾ ಕೇಂದ್ರ ಸ್ಥಾಪಿಸಲು ಮಹತ್ವದ ಕ್ರಮ ಕೈಗೊಳ್ಳಲಾಗಿದೆ. ಈ ಕೇಂದ್ರ ಸ್ಥಾಪನೆಗಾಗಿ ಕಲಬುರಗಿಯ ಅಕ್ಕಮಹಾದೇವಿ ಬಡಾವಣೆಯಲ್ಲಿ ಕರ್ನಾಟಕ ಗೃಹ ಮಂಡಳಿಯು ಉಚಿತವಾಗಿ ಭೂಮಿ ಮಂಜೂರು ಮಾಡಿದೆ ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕ ಭಾಗದ ಯುವಜನರಲ್ಲಿ ಅಡಗಿರುವ ನಾವೀನ್ಯಪೂರ್ಣ ಆಲೋಚನೆಗಳು, ಸಂಶೋಧನಾ ಸಾಮರ್ಥ್ಯ ಮತ್ತು ಉದ್ಯಮಶೀಲತೆಯ ಆಸಕ್ತಿಗೆ ಸೂಕ್ತ ವೇದಿಕೆ ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಬೆಂಗಳೂರಿಗೆ ಮಾತ್ರ ಸೀಮಿತವಾಗಿರುವ ತಂತ್ರಜ್ಞಾನ ಆಧಾರಿತ ಉದ್ಯಮ ವ್ಯವಸ್ಥೆಯನ್ನು ರಾಜ್ಯದ ಇತರ ನಗರಗಳಿಗೂ ವಿಸ್ತರಿಸುವ ಮೂಲಕ ಸ್ಥಳೀಯ ಪ್ರತಿಭೆಗಳಿಗೆ ತಮ್ಮದೇ ಜಿಲ್ಲೆಗಳಲ್ಲಿ ಉದ್ಯಮಗಳನ್ನು ಆರಂಭಿಸಲು ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದ್ದಾರೆ.

ಸ್ಥಳೀಯ ಯುವಜನರ ಆಲೋಚನೆಗಳಿಗೆ ತಾಂತ್ರಿಕ ವೇದಿಕೆ: ಲೀಪ್ ಗ್ರೋತ್ ಲ್ಯಾಬ್ ಕೇವಲ ಕಚೇರಿ ಅಥವಾ ಮೂಲಸೌಕರ್ಯ ಕೇಂದ್ರವಾಗಿರದೆ, ಯುವ ಉದ್ಯಮಿಗಳು, ನವೋದ್ಯಮಿಗಳು, ಸಂಶೋಧಕರು ಹಾಗೂ ನವೀನ ಆಲೋಚನೆ ಹೊಂದಿರುವವರಿಗೆ ಅಗತ್ಯವಿರುವ ಎಲ್ಲ ರೀತಿಯ ನೆರವು ಒದಗಿಸುವ ಸಮಗ್ರ ನಾವೀನ್ಯತಾ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. ಹೊಸ ಉದ್ಯಮಗಳನ್ನು ಆರಂಭಿಸಲು ಆಸಕ್ತಿ ಹೊಂದಿರುವವರಿಗೆ ಮಾರ್ಗದರ್ಶನ, ತಾಂತ್ರಿಕ ನೆರವು, ಅತ್ಯಾಧುನಿಕ ಮೂಲಸೌಕರ್ಯ, ಬಂಡವಾಳ ಹೂಡಿಕೆಗೆ ಸಂಪರ್ಕ, ಉದ್ಯಮ ಅಭಿವೃದ್ಧಿಗೆ ಅಗತ್ಯ ಸೌಲಭ್ಯಗಳನ್ನು ಒಂದೇ ಸೂರಿನಡಿ ಒದಗಿಸುವುದು ಇದರ ಆಶಯ ವಾಗಿದೆ. ಆರಂಭಿಕ ಹಂತದಲ್ಲಿರುವ ನವೋದ್ಯಮಗಳು ತಮ್ಮ ಆಲೋಚನೆಗಳನ್ನು ಕಾರ್ಯರೂಪಕ್ಕೆ ತಂದು, ಉತ್ಪನ್ನ ಹಾಗೂ ಸೇವೆಗಳಾಗಿ ಅಭಿವೃದ್ಧಿಪಡಿಸಲು ಈ ಕೇಂದ್ರ ನೆರವಾಗಲಿದೆ ಎಂದರು.

ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ನವೋದ್ಯಮಗಳ ನಡುವೆ ಸಹಭಾಗಿತ್ವ ಬೆಳೆಸುವ ಮೂಲಕ ಹೊಸ ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಅವುಗಳ ಪ್ರಾಯೋಗಿಕ ಬಳಕೆಗೆ ಅವಕಾಶ ಕಲ್ಪಿಸಲಾಗುವುದು. ಗ್ರಾಮೀಣ ಮತ್ತು ಅರೆನಗರ ಪ್ರದೇಶಗಳಲ್ಲಿಯೂ ನವೋದ್ಯಮ ಸಂಸ್ಕೃತಿ ಬೆಳೆಸುವುದು ಯೋಜನೆಯ ಮತ್ತೊಂದು ಪ್ರಮುಖ ಉದ್ದೇಶವಾಗಿದೆ ಎಂದು ವಿವರಿಸಿದರು.

ಬೆಂಗಳೂರು ಹೊರಗೂ ತಂತ್ರಜ್ಞಾನ ಉದ್ಯಮಗಳ ಬೆಳವಣಿಗೆ

ರಾಜ್ಯದ ವಿವಿಧ ಭಾಗಗಳಲ್ಲಿ ತಂತ್ರಜ್ಞಾನ ಆಧಾರಿತ ಕೈಗಾರಿಕೆಗಳು ಮತ್ತು ಉದ್ಯಮಗಳನ್ನು ಸ್ಥಾಪಿಸಲು ಉತ್ತೇಜನ ನೀಡುವ ಮೂಲಕ ಪ್ರಾದೇಶಿಕ ಆರ್ಥಿಕ ಅಭಿವೃದ್ಧಿಗೆ ವೇಗ ನೀಡುವುದು ಲೀಪ್ ಯೋಜನೆಯ ಉದ್ದೇಶವಾಗಿದೆ. ಸ್ಥಳೀಯ ಯುವಜನರು ಉದ್ಯೋಗಕ್ಕಾಗಿ ಬೆಂಗಳೂರು ಅಥವಾ ಇತರ ಮಹಾನಗರಗಳಿಗೆ ವಲಸೆ ಹೋಗುವ ಅನಿವಾರ್ಯತೆಯನ್ನು ಕಡಿಮೆ ಮಾಡಿ, ತಮ್ಮ ಜಿಲ್ಲೆಗಳಲ್ಲಿಯೇ ಉದ್ಯೋಗ ಸೃಷ್ಟಿಸುವ ಉದ್ಯಮಿಗಳಾಗಿ ಬೆಳೆಯಲು ಅಗತ್ಯವಾದ ವಾತಾವರಣ ನಿರ್ಮಿಸಲು ಈ ಯೋಜನೆ ಸಹಕಾರಿಯಾಗಲಿದೆ. ಅಕ್ಕಮಹಾದೇವಿ ಬಡಾವಣೆಯಲ್ಲಿ ಕೇಂದ್ರ ಸ್ಥಾಪನೆಗೆ ಅಗತ್ಯವಾದ ಭೂಮಿ ಉಚಿತವಾಗಿ ಮಂಜೂರಾಗಿರುವುದರಿಂದ ಮುಂದಿನ ಹಂತದ ಕಾರ್ಯಗಳನ್ನು ಕೈಗೊಳ್ಳಲು ಅನುಕೂಲವಾಗಲಿದೆ ಎಂದು ಅಭಿಪ್ರಾಯಪಟ್ಟರು.



ವಿಶ್ವ ಸ್ಟ್ರೋಕ್ ದಿನಾಚರಣೆ ಅಂಗವಾಗಿ ಕರ್ನಾಟಕ ಸ್ಟ್ರೋಕ್ ಫೌಂಡೇಶನ್ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಜಂಟಿ ಸಹಯೋಗದಲ್ಲಿ ವಿಧಾನ ಸೌಧದ ಮುಂಭಾಗ ಕಾರ್ಯಕ್ರಮ ಆಯೋಜಿಸಲಾಗಿತ್ತು. ಡಾ. ಭಗವಾನ್, ಡಾ.ವಿಕ್ರಂ ಹುಡೇದ, ಡಾ.ಜಿ.ಟಿ.ಸುಭಾಷ್, ಡಾ.ಸೂರ್ಯನಾರಾಯಣ ಶರ್ಮ ಪಾಲ್ಗೊಂಡಿದ್ದರು.

ಜೈವಿಕ ಇಂಧನ ಕ್ಷೇತ್ರದಲ್ಲಿ ದ್ವಿಪಕ್ಷೀಯ ಒಡಂಬಡಿಕೆಗೆ ಪ್ರಸ್ತಾವನೆ: ಸುಧೀಂದ್ರ



ಥೈಲ್ಯಾಂಡ್ ದೇಶದ ವಿದೇಶಾಂಗ ವ್ಯವಹಾರಗಳ ಸಚಿವರ ಸಲಹೆಗಾರರಾದ ಜೂಕ್ರ್ ಬೂನ್ ಲಾಂಗ್ ಅವರನ್ನು ಮಂಡಳಿಯ ಅಧ್ಯಕ್ಷ ಎಸ್. ಈ. ಸುಧೀಂದ್ರ ಸ್ವಾಗತಿಸಿದರು. ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರಾದ ಶಿವಶಂಕರ್ , ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಲೋಹಿತ್, ಯೋಜನಾ ಸಲಹೆಗಾರರಾದ ಡಾ. ದಯಾನಂದ ಇದ್ದರು.

ಬೆಂಗಳೂರು: ಕರ್ನಾಟಕ ರಾಜ್ಯದ ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿ, ಅಂತರರಾಷ್ಟ್ರೀಯ ತಂತ್ರಜ್ಞಾನ ವಿನಿಮಯ ಹಾಗೂ ವಿದೇಶಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ಥೈಲ್ಯಾಂಡ್ ದೇಶದೊಂದಿಗೆ ದ್ವಿಪಕ್ಷೀಯ ಸಹಕಾರವನ್ನು ಸ್ಥಾಪಿಸಲು ಮಹತ್ವದ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಈ ಸಂಬಂಧ ಥೈಲ್ಯಾಂಡ್ ದೇಶದ ವಿದೇಶಾಂಗ ವ್ಯವಹಾರಗಳ ಸಚಿವರ (ರಾಜಕೀಯ ವ್ಯವಹಾರಗಳು) ಸಲಹೆಗಾರರಾದ ಜೂಕ್ರ್ ಬೂನ್ ಲಾಂಗ್, ಚೆನ್ನೈನ ಕಾನ್ಸುಲ್ ಜನರಲ್ ರಾಚಾ ಅರಿಬಾರ್ಗ್ ಮತ್ತು ಉಪ ಕಾನ್ಸುಲ್ ಜನರಲ್ ಫೊನ್ಸುನ್ ಪುಪಿಯಾಂಗ್ಜ್ಯ ಅವರನ್ನೊಳಗೊಂಡ ಉನ್ನತ ಮಟ್ಟದ ನಿಯೋಗವನ್ನು ಮುಖ್ಯಮಂತ್ರಿಗಳ ಪರವಾಗಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಎಸ್. ಈ.ಸುಧೀಂದ್ರ ಅವರು ಸ್ವಾಗತಿಸಿದರು.


ಉನ್ನತಮಟ್ಟದ ಸಭೆಯಲ್ಲಿ ಉಭಯ ದೇಶಗಳ ಪ್ರತಿನಿಧಿಗಳು ಜೈವಿಕ ಇಂಧನ ಕ್ಷೇತ್ರದಲ್ಲಿನ ಪರಸ್ಪರ ಸಹಕಾರದ ಸಾಧ್ಯತೆಗಳ ಕುರಿತು ಸುದೀರ್ಘ ಸಮಾ ಲೋಚನೆ ನಡೆಸಿದರು. ಪ್ರಮುಖವಾಗಿ ಬಳಸಿದ ಅಡುಗೆ ಎಣ್ಣೆ ನಿರ್ವಹಣೆ, ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು ಹಾಗೂ ವಾಣಿಜ್ಯ ಸಂಸ್ಥೆಗಳಿಂದ ಬಳಸಿದ ಅಡುಗೆ ಎಣ್ಣೆಯನ್ನು ವೈಜ್ಞಾನಿಕವಾಗಿ ಸಂಗ್ರಹಿಸುವ ವ್ಯವಸ್ಥೆಯನ್ನು ಬಲಪಡಿಸುವುದು ಮತ್ತು ಅದನ್ನು ಮರಳಿ ಆಹಾರ ತಯಾರಿಕೆಯಲ್ಲಿ ಬಳಸುವುದನ್ನು ತಡೆಗಟ್ಟಿ, ಜೈವಿಕ ಇಂಧನ ಉತ್ಪಾದನೆಗೆ ಸಮರ್ಪಕವಾಗಿ ಬಳಸಿಕೊಳ್ಳುವ ಕುರಿತು ಚರ್ಚಿಸಲಾಯಿತು.

ಮಂಡಳಿಯ ಅಧ್ಯಕ್ಷ ಎಸ್. ಈ.ಸುಧೀಂದ್ರ ಮಾತನಾಡಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸುಸ್ಥಿರ ಅಭಿವೃದ್ಧಿ ಮತ್ತು ದೂರದೃಷ್ಟಿಯ ಯೋಜನೆಗಳಲ್ಲಿ ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಗೆ ಮಹತ್ವದ ಸ್ಥಾನವಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಈಶ್ವರ್ ಖಂಡ್ರೆ ಅವರ ಮಾರ್ಗದರ್ಶನದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸ್ವಚ್ಛ ಭಾರತ್ ಅಭಿಯಾನದ ಆಶಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದ ನೂತನ ಜೈವಿಕ ಇಂಧನ ನೀತಿಯ ರಚನೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

13ರಂದು ಪ್ರಧಾನಿಯಿಂದ ಮೆಟ್ರೋ ಗುಲಾಬಿ ಮಾರ್ಗ ಉದ್ಘಾಟನೆ: ಸಿಎಂ

ರಾಮನಗರ: ನಮ್ಮ ಆಹ್ವಾನದ ಮೇರೆಗೆ ಪ್ರಧಾನಮಂತ್ರಿಯವರು ಮೆಟ್ರೋ ಗುಲಾಬಿ ಮಾರ್ಗವನ್ನು ಉದ್ಘಾಟಿಸಲು ನ.13ರಂದು ಬೆಂಗಳೂರಿಗೆ ಆಗಮಿಸುತ್ತಿದ್ದಾರೆ. ಕೆಲವರು ಪ್ರಧಾನಿಯನ್ನು ನಾವು ಆಹ್ವಾನಿಸಿದ್ದು ಎಂದು ಪ್ರಚಾರ ಗಿಟ್ಟಿಸುತ್ತಿದ್ದಾರೆ. ಬಿಜೆಪಿಯವರಿಗೂ ಇದಕ್ಕೂ ಏನು ಸಂಬಂಧ? ಎಂದು ಸಿಎಂ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಇದು ಜನರ ದುಡ್ಡು. ನಾವು ಸಾಲ ಪಡೆದು ಮೆಟ್ರೋ ಅಭಿವೃದ್ಧಿ ಮಾಡುತ್ತಿದ್ದೇವೆ, ಕೆಲವು ವಿಚಾರಗಳನ್ನು 13ರಂದು ಪ್ರಧಾನಿಗಳ ಮುಂದೆ ಮಂಡಿಸಲಿದ್ದೇನೆ. ದೆಹಲಿಯಲ್ಲಿ ರಾಹುಲ್ ಗಾಂಧಿಯವರು ಪಿಸಿಸಿ ಅಧ್ಯಕ್ಷರನ್ನು ಹಾಗೂ ಸಿಎಲ್‌ಪಿ ನಾಯಕರನ್ನು ಸಂಜೆ ಸಭೆಗೆ ಕರೆದಿದ್ದಾರೆ. ಒಂದೂವರೆ ಗಂಟೆ ಸಭೆ ನಡೆಯಲಿದ್ದು, ಹೀಗಾಗಿ ದೆಹಲಿಗೆ ತೆರಳುತ್ತಿದ್ದೇನೆ. ದೀಪಾವಳಿ ಹಬ್ಬವಿ ರುವುದರಿಂದ ದೆಹಲಿಯಲ್ಲಿ ಯಾರನ್ನೂ ಭೇಟಿ ಮಾಡುತ್ತಿಲ್ಲ ಎಂದರು.



ಕರ್ನಾಟಕ ರಾಜ್ಯಪಾಲರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಇದೇ ಮೊದಲ ಬಾರಿಗೆ ರಾಜ್ಯಪಾಲೆ ಸುಧಾ ಯಾದವ್ ಅವರು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ನಿವಾಸಕ್ಕೆ ಭೇಟಿ ನೀಡಿ ಚರ್ಚಿಸಿದರು.

ಕಿದ್ವಾಯಿ ಆಸ್ಪತ್ರೆಯಲ್ಲಿ ಕನ್ನಡ ರಾಜ್ಯೋತ್ಸವ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಆವರಣದಲ್ಲಿ ಶುಕ್ರವಾರ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಯೋಜಿಸಲಾಯಿತು.

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಸಂಸ್ಥೆಯ ನಿರ್ದೇಶಕ ಡಾ.ಆರ್.ಕೃಷ್ಣಪ್ಪ ಮಾತನಾಡಿ, ಕ್ಯಾನ್ಸರ್ ರೋಗಿಗಳ ಚಿಕಿತ್ಸಾ ವ್ಯವಸ್ಥೆ ಸುಧಾರಿಸಲು ಕಿದ್ವಾಯಿ ಆಸ್ಪತ್ರೆಗೆ ರಾಜ್ಯ ಸರಕಾರ ರೋಬೋಟಿಕ್ ಸರ್ಜರಿ ಉಪಕರಣಕ್ಕೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿರುವುದು ಶ್ಲಾಘನೀಯ. ಕ್ಯಾನ್ಸರ್ ರೋಗಿಗಳಿಗೆ ಹೊಸ ತಂತ್ರಜ್ಞಾನಗಳ ಮೂಲಕ ಶಸ್ತ್ರ ಚಿಕಿತ್ಸೆ ನಡೆಸಲು ರಾಜ್ಯ ಸರಕಾರ ಎಲ್ಲಾ ಸಹಕಾರ ನೀಡುತ್ತಿದೆ. ಈಗಾಗಲೇ ನಮ್ಮಲ್ಲಿ ಒಂದು ರೊಬೊಟಿಕ್ ಯಂತ್ರ ಅಳವಡಿಸಿಕೊಳ್ಳಲಾಗಿದ್ದು, ಯಶಸ್ವಿಯಾಗಿ ಶಸ್ತ್ರಚಿಕಿತ್ಸೆಗಳು ನಡೆಯುತ್ತಿದೆ. ಮತ್ತೊಂದು ರೊಬೊಟಿಕ್ ಯಂತ್ರ ಅಳವಡಿಸಿಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ಕಿದ್ವಾಯಿಗೆ ಚಿಕಿತ್ಸೆಗಾಗಿ ಬರುವ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಬೆಡ್‌ಗಳ ಸಂಖ್ಯೆ ಹೆಚ್ಚಳ ಮಾಡಲಾಗುತ್ತಿದೆ. ರೋಗಿಗಳಿಗೆ ತ್ವರಿತಗತಿಯಲ್ಲಿ ಚಿಕಿತ್ಸೆ ನೀಡಲು ಎಲ್ಲಾ ಆಧುನಿಕ ಸೌಲಭ್ಯ ಅಳವಡಿಸಿಕೊಳ್ಳಲಾಗುತ್ತಿದೆ. ಹೊಸ ಎಂಆರ್‌ಐ ಯಂತ್ರ ಸದ್ಯದಲ್ಲೇ ರೋಗಿಗಳ ಸೇವೆಗೆ ಲಭ್ಯವಾಗಲಿದೆ. ಸಂಸ್ಥೆಯಲ್ಲಿರುವ ಶಾಂತಿಧಾಮದಲ್ಲಿ ದಾಖಲಾಗುವ ರೋಗಿಗಳಿಗೆ ಪ್ರತ್ಯೇಕ ಒಪಿಡಿ ತೆರೆಯಲಾಗುತ್ತದೆ. ತುಮಕೂರು, ಮೈಸೂರು, ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ಫೆರಿಫೆರಲ್ ಕ್ಯಾನ್ಸರ್ ಘಟಕಗಳನ್ನು ತೆರೆಯಲಾಗುತ್ತಿದೆ ಎಂದು ಹೇಳಿದರು.

ಸಂಸ್ಥೆಯ ವೈದ್ಯಕೀಯ ಅಧೀಕ್ಷಕಿ ಡಾ.ಶೋಭಾ ಅವರು ಮಾತನಾಡಿ, ಕರ್ನಾಟಕ ಏಕೀಕರ ಚಳವಳಿಯಲ್ಲಿ ಆಲೂರು ವೆಂಕಟರಾವ್ ಮತ್ತು ಇತರ ಮಹನೀಯರ ಕೊಡುಗೆಯು ಅಪಾರವಾಗಿದೆ. 1956ರ ಬಳಿಕ ಪ್ರತಿವರ್ಷ ನ.1ರಂದು ಕನ್ನಡ ರಾಜ್ಯೋತ್ಸವ ಸಂಭ್ರಮದಿಂದ ಆಚರಿಸಲಾಗುತ್ತದೆ. ಇದು ಕರ್ನಾಟಕ ರಾಜ್ಯದ ಏಕೀಕರಣ, ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಹೆಮ್ಮೆಯನ್ನು ಸಂಕೇತಿಸುತ್ತದೆ ಎಂದು ತಿಳಿಸಿದರು.



ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಸಂಸ್ಥೆಯ ನಿರ್ದೇಶಕ ಡಾ.ಆರ್. ಕೃಷ್ಣಪ್ಪ, ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಎಸ್. ಕಾತ್ಯಾಯನಿ ದೇವಿ, ವೈದ್ಯಕೀಯ ಅಧೀಕ್ಷಕರಾದ ಡಾ.ಶೋಭಾ ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು.

ಬಂಡೀಪುರದಲ್ಲಿ ಅರಣ್ಯಾಧಿಕಾರಿಗಳು, ಸಿಬ್ಬಂದಿಯೊಂದಿಗೆ ರಾಮಲಿಂಗಾರೆಡ್ಡಿ ಸಭೆ

ಆನೆ ಸಂಚಾರಕ್ಕೆ ಕಾರಿಡಾರ್ ನಿರ್ಮಾಣ

ಚಾಮರಾಜನಗರ: ಆನೆಗಳು ಖಾಸಗಿ ಜಮೀನುಗಳಿಗೆ ಪ್ರವೇಶಿಸಿ ಬೆಳೆ ನಾಶಪಡಿಸುವುದನ್ನು ತಡೆಗಟ್ಟಲು ಆನೆ ಕಾರಿಡಾರ್‌ಗಳಿಗಾಗಿ ಅಗತ್ಯವಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ಬ್ಯಾರಿಕೇಡ್ ನಿರ್ಮಿಸುವ ಮೂಲಕ ಮಾನವವನ್ಯಜೀವಿ ಸಂಘರ್ಷವನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಬಂಡೀಪುರದಲ್ಲಿ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಸಭೆ ನಡೆಸಿದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಣಿಯನಪುರ ಆನೆ ಕಾರಿಡಾರ್ ನಿರ್ಮಾಣದ ಪ್ರಸ್ತಾಪದ ಬಗ್ಗೆಯೂ ಚರ್ಚೆ ನಡೆಸಲಾಗಿದೆ. ಆನೆಗಳ ಸಂಚಾರಕ್ಕೆ ಅನುಕೂಲವಾಗುವಂತೆ ಕಾರಿಡಾರ್ ನಿರ್ಮಿಸಿ, ರೈತರ ಜಮೀನುಗಳಿಗೆ ಆನೆಗಳು ಪ್ರವೇಶಿಸುವುದನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಮಲೆ ಮಹದೇಶ್ವರ ಬೆಟ್ಟದ ಪ್ರದೇಶವನ್ನು ಹುಲಿ ಸಂರಕ್ಷಿತ ಪ್ರದೇಶ ಎಂದು ಘೋಷಿಸುವ ಪ್ರಸ್ತಾಪ ರಾಜ್ಯ ವನ್ಯಜೀವಿ ಮಂಡಳಿಯಲ್ಲಿ ಚರ್ಚೆಯಾಗಿದೆ. ಆದರೆ ಸ್ಥಳೀಯ ಜನರ ಅಭಿಪ್ರಾಯ ಸಂಗ್ರಹಿಸಿದಾಗ ಟೈಗರ್ ರಿಸರ್ವ್ ಘೋಷಣೆಯಿಂದ ತಮಗೆ ಅನಾನುಕೂಲವಾಗಲಿದೆ ಎಂಬ ಆತಂಕ ವ್ಯಕ್ತಪಡಿಸಿ ವಿರೋಧಿಸಿದ್ದಾರೆ. ಈಗಾಗಲೇ ಈ ಪ್ರದೇಶ ಅಭಯಾರಣ್ಯವಾಗಿದ್ದು, ಅಭಯಾರಣ್ಯ ಮತ್ತು ಟೈಗರ್ ರಿಸರ್ವ್ ನಡುವೆ ಹೆಚ್ಚಿನ ವ್ಯತ್ಯಾಸವಿಲ್ಲದಿದ್ದರೂ ಜನರ ಆತಂಕವನ್ನು ಪರಿಗಣಿಸಿ ಸರಕಾರ ಅಂತಿಮ ನಿರ್ಧಾರ ಕೈಗೊಳ್ಳಲಿದೆ ಎಂದು ಹೇಳಿದರು.

ಸೆರೆಹಿಡಿಯುವ ಆನೆಗಳನ್ನು ದಸರಾ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ಅಗತ್ಯವಿರುವಷ್ಟು ಅರಣ್ಯ ಇಲಾಖೆಯಲ್ಲಿ ಉಳಿಸಿಕೊಳ್ಳಲಾಗುವುದು. ವಯಸ್ಸಾದ ಹಾಗೂ ಗಾಯಗೊಂಡ ವನ್ಯಜೀವಿಗಳನ್ನು ರಕ್ಷಣಾ ಕೇಂದ್ರಗಳಲ್ಲಿ ಇರಿಸಲಾಗುತ್ತದೆ. ಆರೋಗ್ಯವಾಗಿರುವ ಹಾಗೂ ಸದೃಢ ಪ್ರಾಣಿಗಳನ್ನು ಸೂಕ್ತ ಸ್ಥಳಗಳಿಗೆ ಸ್ಥಳಾಂತರಿಸಲಾಗುವುದು ಎಂದು ಅವರು ತಿಳಿಸಿದರು.

ಚಾಮರಾಜನಗರ ಜಿಲ್ಲೆಯ ನಾಲ್ಕು ಅರಣ್ಯ ವಿಭಾಗಗಳಲ್ಲಿ ಡ್ರೋನ್ ಹಾಗೂ ಬಾಡಿ ಕ್ಯಾಮೆರಾಗಳ ಕೊರತೆಯಿದೆ. ಈ ಉಪಕರಣಗಳ ಅಗತ್ಯತೆ ಕುರಿತು ಪಟ್ಟಿ ಸಿದ್ಧಪಡಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುತ್ತಿದೆ. ಅಲ್ಲದೆ, ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯ ಮೂಲಕವೂ ಅಗತ್ಯ ತಾಂತ್ರಿಕ ಉಪಕರಣಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾಡಿನಲ್ಲಿ ಲಂಟಾನ ಸಸ್ಯಗಳು ಸುಮಾರು ಶೇ.38ರಷ್ಟು ಹರಡಿಕೊಂಡಿದ್ದು, ಅವುಗಳನ್ನು ನಿಯಂತ್ರಿಸದಿದ್ದರೆ ಅರಣ್ಯದ ನೈಸರ್ಗಿಕ ಬೆಳವಣಿಗೆಗೆ ತೀವ್ರ ತೊಂದರೆಯಾಗಲಿದೆ. ಲಂಟಾನ ತೆರವುಗೊಳಿಸಲು ಪರಿಸರಕ್ಕೆ ಹಾನಿಯಾಗದಂತೆ ಆಧುನಿಕ ಯಂತ್ರೋಪಕರಣಗಳನ್ನು ಬಳಸುವ ಕುರಿತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಕೈಯಿಂದ ತೆರವುಗೊಳಿಸುವ ಕಾರ್ಯಕ್ಕೆ ಹೆಚ್ಚಿನ ಸಮಯ ಹಾಗೂ ವೆಚ್ಚ ತಗಲುವುದರಿಂದ ಯಂತ್ರೋಪಕರಣಗಳ ಬಳಕೆಗೆ ಆದ್ಯತೆ ನೀಡಲಾಗುವುದು ಎಂದರು.

ವನ್ಯಜೀವಿಗಳ ದಾಳಿಯಿಂದ ಮೃತಪಟ್ಟವರ ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡುವ ವಿಚಾರ ಹಾಗೂ ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸುವುದಕ್ಕೆ ಸಂಬಂಧಿಸಿದ ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದೆ ಎಂದು ತಿಳಿಸಿದರು. ಅರಣ್ಯದ ಹೊರಭಾಗದಲ್ಲಿರುವ ಕೆರೆ-ಕಟ್ಟೆಗಳು ಹಾಗೂ ಜಲಮೂಲಗಳ ಸುತ್ತಮುತ್ತ ಮರಗಳು ಮತ್ತು ಪೊದೆಗಳು ಬೆಳೆದು ಹುಲಿ, ಚಿರತೆಗಳಂತಹ ವನ್ಯಜೀವಿಗಳು ಆಶ್ರಯ ಪಡೆಯುತ್ತಿರುವುದರಿಂದ ಮಾನವವನ್ಯಜೀವಿ ಸಂಘರ್ಷಕ್ಕೆ ಕಾರಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಕೆರೆ-ಕಟ್ಟೆಗಳನ್ನು ಸ್ವಚ್ಛಗೊಳಿಸುವ ಅಗತ್ಯವಿದೆ. ಇದಕ್ಕೆ ಬೇಕಾದ ಅನುದಾನ ಮತ್ತು ಜವಾಬ್ದಾರಿ ಹಂಚಿಕೆ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಶಾಸಕರಿಗೆ ಪತ್ರ ಬರೆಯುವ ಬಗ್ಗೆಯೂ ಚರ್ಚಿಸಲಾಗಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ವಿವರಿಸಿದರು.



ಅನುಮತಿ ಇಲ್ಲದ ರೆಸಾರ್ಟ್, ಹೋಂಸ್ಟೇಗಳಿಗೆ ಅವಕಾಶವಿಲ್ಲ

ಬಂಡೀಪುರ ಅರಣ್ಯ ವ್ಯಾಪ್ತಿ ಹಾಗೂ ಪರಿಸರ ಸೂಕ್ಷ್ಮ ವಲಯದಲ್ಲಿ ಅಕ್ರಮ ಹೋಂಸ್ಟೇ ಮತ್ತು ರೆಸಾರ್ಟ್‌ಗಳು ಹೆಚ್ಚಾಗುತ್ತಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಿಯಮಾವಳಿಗಳ ಪ್ರಕಾರ ಅನುಮತಿ ಪಡೆದಿರುವ ಘಟಕಗಳಿಗೆ ಮಾತ್ರ ಅವಕಾಶ ನೀಡಲಾಗುತ್ತಿದೆ. ಅಕ್ರಮವಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ. ಕೆಲವು ಪ್ರಕರಣಗಳು ನ್ಯಾಯಾಲಯದ ತಡೆಯಾಜ್ಞೆ ಹೊಂದಿದ್ದು, ಅವುಗಳನ್ನು ತೆರವುಗೊಳಿಸಲು ಕಾನೂನು ಪ್ರಕ್ರಿಯೆ ಕೈಗೊಳ್ಳಲಾಗುವುದು. ಅರಣ್ಯ ಪ್ರದೇಶದ ಒಳಗೆ ಯಾವುದೇ ಅಕ್ರಮ ರೆಸಾರ್ಟ್ ಅಥವಾ ಹೋಂಸ್ಟೇಗಳಿಗೆ ಅವಕಾಶವಿಲ್ಲ. ಈ ಕುರಿತು ಮೇಲ್ವಿಚಾರಣಾ ಸಮಿತಿ ಹಾಗೂ ವಿಭಾಗೀಯ ಆಯುಕ್ತರು ನಿಗಾವಹಿಸಲಿದ್ದಾರೆ ಎಂದು ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದರು.

ಮೀಶೋ ಲಿಮಿಟೆಡ್

(ಹಿಂದೆ ಮೀಶೋ ಪ್ರೈವೇಟ್ ಲಿಮಿಟೆಡ್ ಹಾಗೂ ಫ್ಯಾಶ್ನಿಯರ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
CIN : L74900KA2015PLC082263
ನೋಂದಾಯಿತ ಕಚೇರಿ : 3ನೇ ಮಹಡಿ, ವಿಂಗ್ – ಇ, ಹೆಲಿಯೋಸ್ ಬಿಸಿನೆಸ್ ಪಾರ್ಕ್, ಕಾಡುಬೀಸನಹಳ್ಳಿಗ್ರಾಮ ವರ್ತೂರು ಹೋಬಳಿ, ಔಟರ್ ರಿಂಗ್ ರಸ್ತೆ, ಬೆಂಗಳೂರು, ಕರ್ನಾಟಕ-560103, ದೂರವಾಣಿ : +91 9108021923 ಇ-ಮೇಲ್ : cs@meesho.com, ವೆಬ್‌ಸೈಟ್ : www.meesho.com

ರಿಮೋಟ್ ಇ-ಮತದಾನ ಮೂಲಕ ಅಂಚೆ ಮತಪತ್ರದ ಸೂಚನೆ

ಮೀಶೋ ಲಿಮಿಟೆಡ್ ("ಕಂಪನಿ") ನ ಷೇರುದಾರರಿಗೆ ("ಸದಸ್ಯರು") ಈ ಮೂಲಕ ಸೂಚನೆ ನೀಡಲಾಗಿದೆ. ಕಂಪನಿಗಳ ಕಾಯ್ದೆ, 2013 ("ಕಾಯ್ದೆ") ರ ಕಲಂ 108 ಮತ್ತು 110 ಹಾಗೂ ಇತರ ಅನ್ವಯವಾಗುವ ಉಪಬಂಧಗಳು, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20 ಮತ್ತು 22, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿದ ವಿವಿಧ ಸುತ್ತೋಲೆಗಳು ("ಸಚಿವಾಲಯದ ಸುತ್ತೋಲೆಗಳು") (ಇವುಗಳ ಯಾವುದೇ ಶಾಸನಬದ್ಧ ತಿದ್ದುಪಡಿ ಅಥವಾ ಮರು-ಜಾರಿ ಸೇರಿದಂತೆ, ಅದು ಸದ್ಯ ಜಾರಿಯಲ್ಲಿರುವಂತೆ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ), ಭಾರತೀಯ ಭದ್ರತಾ ಮತ್ತು ವಿನಿಮಯ ಮಂಡಳಿಯ (ಪಟ್ಟಿಗೊಳಿಸುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಾವಳಿಗಳು, 2015 ("ಸೆಬಿ ಪಟ್ಟಿಗೊಳಿಸುವ ನಿಯಮಾವಳಿಗಳು") ರ ನಿಯಮ 44, ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯು ಹೊರಡಿಸಿದ ಸಾಮಾನ್ಯ ಸಭೆಗಳ ಕುರಿತಾದ ಕಾರ್ಯದರ್ಶಿ ಮಾನದಂಡ ("ಎಸ್ಎಸ್-2") ಮತ್ತು ಇತರ ಅನ್ವಯವಾಗುವ ಕಾನೂನುಗಳು ಹಾಗೂ ನಿಯಮಗಳ ಅನುಸಾರ, ಕೆಳಗೆ ಲಗತ್ತಿಸಿರುವ ನಿರ್ಣಯವನ್ನು ಸದಸ್ಯರು ದೂರಸ್ಥ ವಿದ್ಯುನ್ಮಾನ ಮತದಾನ ("ಇ-ವೋಟಿಂಗ್") ಪ್ರಕ್ರಿಯೆಯ ಮೂಲಕ 'ಅಂಚೆ ಮತಪತ್ರ' ರೂಪದಲ್ಲಿ ಅಂಗೀಕರಿಸಲು ಪ್ರಸ್ತಾಪಿಸಲಾಗಿದೆ.

ಕ್ರ.ಸಂ.	ವಿವರ	ನಿರ್ಣಯದ ವಿಧ
1	ಕ್ರಮ ಸಂಖ್ಯೆ 1: ಶ್ರೀ ಸುಧೀರ್ ಗಣೇಶ್ ಸೀತಾಪತಿ (ನಿರ್ದೇಶಕರ ಗುರುತಿನ ಸಂಖ್ಯೆ: 09197063) ಅವರನ್ನು ಕಂಪನಿಯ ಕಾರ್ಯನಿರ್ವಾಹಕೇತರ ಸ್ವತಂತ್ರ ನಿರ್ದೇಶಕರಾಗಿ ನೇಮಿಸುವುದು ಮತ್ತು ಗೌರವಧನ ಪಾವತಿಸುವುದು.	ವಿಶೇಷ ನಿರ್ಣಯ

ವಿವರಣಾತ್ಮಕ ಹೇಳಿಕೆ ಮತ್ತು ರಿಮೋಟ್ ಇ-ವೋಟಿಂಗ್ ಸೂಚನೆಗಳೊಂದಿಗೆ ಅಂಚೆ ಮತಪತ್ರದ ಸೂಚನೆಯ ಎಲೆಕ್ಟ್ರಾನಿಕ್ ಪ್ರತಿಗಳನ್ನು 2026ರ ನವೆಂಬರ್ 6, ಶುಕ್ರವಾರದಂದು ಇಮೇಲ್ ಮೂಲಕ ಕಳುಹಿಸಲಾಗಿದೆ. ಇದನ್ನು, ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ ಆದ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ("Kfin"/"RTA") ಅಥವಾ ಡಿಪಾಸಿಟರಿ/ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳ ("DP") ಬಳಿ ಇಮೇಲ್ ಐಡಿ ನೋಂದಾಯಿಸಿರುವ ಮತ್ತು 2026ರ ಅಕ್ಟೋಬರ್ 30, ಶುಕ್ರವಾರದಂದು ("ಕಟ್-ಆಫ್ ದಿನಾಂಕ") ಸದಸ್ಯರ ನೋಂದಣಿ ಪುಸ್ತಕ ಅಥವಾ ಫಲಾನುಭವಿ ಮಾಲೀಕರ ನೋಂದಣಿಯಲ್ಲಿ ಹೆಸರಿರುವ ಸದಸ್ಯರಿಗೆ ಕಳುಹಿಸಲಾಗಿದೆ. ಈ ಸೂಚನೆಯು ಕಂಪನಿಯ ವೆಬ್‌ಸೈಟ್ www.meesho.com, ಇ-ವೋಟಿಂಗ್ ಸೇವಾ ಪೂರೈಕೆದಾರರಾದ ಕೆಫಿನ್ ಅವರ ವೆಬ್‌ಸೈಟ್ https://evoting.kfintech.com/showallevents.aspx, ಹಾಗೂ ಕಂಪನಿಯ ಈಕ್ವಿಟಿ ಷೇರುಗಳು ಪಟ್ಟಿಯಾಗಿರುವ ಬಿಎಸ್ಇ ಲಿಮಿಟೆಡ್ (www.bseindia.com) ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com)ವೆಬ್‌ಸೈಟ್‌ಗಳಲ್ಲೂ ಲಭ್ಯವಿದೆ.

ಕಾಯ್ದೆ, ಸೆಬಿ ಲಿಸ್ಟಿಂಗ್ ನಿಯಮಾವಳಿ ಮತ್ತು ಎಂಸಿಎ ಸುತ್ತೋಲೆಗಳ ಅನುಸಾರ, 2026ರ ಅಕ್ಟೋಬರ್ 30, ಶುಕ್ರವಾರದಂದು ಸದಸ್ಯರ ನೋಂದಣಿಯಲ್ಲಿ ಅಥವಾ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರಿರುವ ಎಲ್ಲಾ ಅರ್ಹ ಸದಸ್ಯರಿಗೆ ಆರ್‌ಟಿಎ ಮೂಲಕ ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ನೀಡಲು ಕಂಪನಿ ಸಿದ್ಧವಿದೆ. ಎಂಸಿಎ ಸುತ್ತೋಲೆಗಳ ಪ್ರಕಾರ, ತಮ್ಮ ಒಪ್ಪಿಗೆ ಅಥವಾ ಭಿನ್ನಾಭಿಪ್ರಾಯವನ್ನು ರಿಮೋಟ್ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಮಾತ್ರ ತಿಳಿಸಲು ಕೋರಲಾಗಿದೆ. ಕಟ್-ಆಫ್ ದಿನಾಂಕದಂದು ಸದಸ್ಯರಲ್ಲದವರು ಈ ಸೂಚನೆಯನ್ನು ಕೇವಲ ಮಾಹಿತಿಗಾಗಿ ಪರಿಗಣಿಸಬೇಕು.

ಇ-ವೋಟಿಂಗ್ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ (ಎರಡೂ ದಿನಗಳು ಸೇರಿ) ಲಭ್ಯವಿರುತ್ತದೆ:

ಮತದಾನದ ಅರ್ಹತೆಗೆ ಕಟ್-ಆಫ್ ದಿನಾಂಕ	ಶುಕ್ರವಾರ, ಅಕ್ಟೋಬರ್ 30, 2026
ರಿಮೋಟ್ ಇ-ವೋಟಿಂಗ್ ಆರಂಭ	ಸೋಮವಾರ, ನವೆಂಬರ್ 9, 2026, ಬೆಳಿಗ್ಗೆ 9.00 (ಭಾ.ಕಾ)
ರಿಮೋಟ್ ಇ-ವೋಟಿಂಗ್ ಅಂತ್ಯ	ಮಂಗಳವಾರ, ಡಿಸೆಂಬರ್ 08, 2026, ಸಂಜೆ 5.00 (ಭಾ.ಕಾ)

2026ರ ಡಿಸೆಂಬರ್ 8, ಮಂಗಳವಾರ ಸಂಜೆ 5.00 (ಭಾಕಾ.) ನಂತರ ತಕ್ಷಣವೇ ಆರ್‌ಟಿಎ ಇ-ವೋಟಿಂಗ್ ಸೌಲಭ್ಯವನ್ನು ಸ್ಥಗಿತಗೊಳಿಸುತ್ತದೆ ಮತ್ತು ಅದರ ನಂತರ ಮತದಾನಕ್ಕೆ ಅವಕಾಶ ಇರುವುದಿಲ್ಲ. ಇ-ವೋಟಿಂಗ್‌ನ ವಿವರವಾದ ಸೂಚನೆಗಳಿಗಾಗಿ ಅಂಚೆ ಮತಪತ್ರದ ಸೂಚನೆಯನ್ನು ನೋಡಲು ಸದಸ್ಯರನ್ನು ಕೋರಲಾಗಿದೆ.

ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ಪರಿಶೀಲಿಸಲು, ಕಂಪನಿ ಸೆಕ್ರೆಟರಿಗಳ ಸಂಸ್ಥೆಯಾದ ಮೆ॥ ಬಿಎಂಪಿ & ಕಂ. ಎಲ್‌ಎಲ್‌ಪಿಯ ಪಾಲುದಾರರಾದ ಶ್ರೀ ಪ್ರಮೋದ್ ಎಸ್.ಎಂ. (ಸಿ.ಪಿ.ಸಂ. 13784), ಅವರು ಲಭ್ಯವಿಲ್ಲದಿದ್ದರೆ ಸಿಎಸ್ ಬಿಸ್ವಜಿತ್ ಘೋಷ್ (ಸಿ.ಪಿ. ಸಂ. 8239) ಅವರನ್ನು ಕಂಪನಿಯು ಪರಿಶೀಲಕರನ್ನಾಗಿ ನೇಮಿಸಿದೆ. ಪರಿಶೀಲಕರು ಕಂಪನಿಗೆ ವರದಿ ಸಲ್ಲಿಸುತ್ತಾರೆ ಮತ್ತು ಅಂಚೆ ಮತಪತ್ರದ ಫಲಿತಾಂಶವನ್ನು 2026ರ ಡಿಸೆಂಬರ್ 10, ಗುರುವಾರ ಅಥವಾ ಅದಕ್ಕಿಂತ ಮೊದಲು ಘೋಷಿಸಲಾಗುತ್ತದೆ.

ಇನ್ನೂ, ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರು, ಡಿಮ್ಯಾಟ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ ತಮ್ಮ ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳ ಬಳಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಕೆವೈಸಿ ಅಪ್‌ಡೇಟ್‌ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿಗೆ ಸದಸ್ಯರು ಕಂಪನಿಯ ಆರ್‌ಟಿಎ ಅನ್ನು einward.ris@kfintech.com ನಲ್ಲಿ ಸಂಪರ್ಕಿಸಬಹುದು.

ಇ-ವೋಟಿಂಗ್‌ಗೆ ಸಂಬಂಧಿಸಿದ ಯಾವುದೇ ಪ್ರಶ್ನೆ, ಸ್ಪಷ್ಟೀಕರಣ ಅಥವಾ ದೂರುಗಳಿಗೆ, ಶ್ರೀ ರಮೇಶ್ ಎಸ್.ಆರ್.,ಸಹಾಯಕ ಉಪಾಧ್ಯಕ್ಷರು, ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಮ್ ಬಿಲ್ಡಿಂಗ್, ಟವರ್ ಬಿ, ಪ್ಲಾಟ್ 31-32, ಗಚ್ಚಿಬೌಲಿ, ಫೈನಾನ್ಶಿಯಲ್ ಡಿಸ್ಟ್ರಿಕ್ಟ್, ನಾನಕ್‌ರಾಮ್‌ಗುಡ, ಸೆರಿಲಿಂಗಂಪಲ್ಲಿ, ಹೈದರಾಬಾದ್, ರಂಗಾರೆಡ್ಡಿ, ತೆಲಂಗಾಣ – 500032 ಅವರನ್ನು evoting@kfintech.com ನಲ್ಲಿ ಸಂಪರ್ಕಿಸಿ ಅಥವಾ ಟೋಲ್-ಫ್ರೀ ಸಂಖ್ಯೆ 1800 309 4001 ಗೆ ಕರೆ ಮಾಡಿ. ಇದಲ್ಲದೆ, ಸದಸ್ಯರು ಕೆಫಿನ್ ವೆಬ್‌ಸೈಟ್ https://evoting.kfintech.com/public/Faq.aspx ನಲ್ಲಿರುವ "Help" ಮತ್ತು "ಎಫ್‌ಎಕ್ಯು" ವಿಭಾಗಗಳನ್ನೂ ನೋಡಬಹುದು.

ಗೆ ಹಾಗೂ ನಿರ್ದೇಶಕರ ಮಂಡಳಿಯ ಪರವಾಗಿ
ಮೀಶೋ ಲಿಮಿಟೆಡ್
(ಹಿಂದೆ ಮೀಶೋ ಪ್ರೈವೇಟ್ ಲಿಮಿಟೆಡ್ ಹಾಗೂ ಫ್ಯಾಶ್ನಿಯರ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸಹಿ/-
ರಾಹುಲ್ ಭಾರದ್ವಾಜ್
ಕಂಪನಿ ಕಾರ್ಯದರ್ಶಿ ಹಾಗೂ ಅನುಸರಣಾ ಅಧಿಕಾರಿ
ಸದಸ್ಯತ್ವ ಸಂ. : ACS41649

ದಿನಾಂಕ: ನವೆಂಬರ್ 06, 2026
ಸ್ಥಳ : ಬೆಂಗಳೂರು